
ನವಸಾಕ್ಷರ ಪುಸ್ತಕ ಮಾಲೆ ೧೭

ಕರಕುಶಲ ವಸ್ತುಗಳು

ನಾ. ಡಿಸೋಜ



374
DES



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ



ವಿದ್ಯಾರಣ್ಯ ಗ್ರಂಥಾಲಯ

...ಲೆ

...ಲಯ

...ಎಸ್.

...ನಾಲಯ

...ರು

ಹಾ. ಮಾ. ನಾಯಕ
ಎಚ್. ನರಸಿಂಹಯ್ಯ
ಜಿ. ನಾರಾಯಣ
ಎಲ್. ಎಸ್. ಶೇಷಗಿರಿರಾವ್
ಶಾಂತರಸ
ಕೆ. ವಿ. ಸುಬ್ಬಣ್ಣ
ಗೊ. ರು. ಚನ್ನಬಸಪ್ಪ
ಪಿ. ಎಸ್. ಶಂಕರ್
ಶಿವಶಂಕರ ಹಿರೇಮಠ
ಆರ್. ಎಸ್. ರಾಜಾರಾಮ್
ಶ್ರೀಮತಿ ಎಲ್. ಜಿ. ಸುಮಿತ್ರ

ಸಂಪಾದಕ ಸಮಿತಿ

ಶ್ರೀಯುತರಾದ
ಎಸ್. ಜಿ. ನಾಗಲೋಟಿಮಠ
ಕೆ. ವಿ. ನಾರಾಯಣ
ಪುರುಷೋತ್ತಮ ಬಿಳಿಮಲೆ
ಕರೀಗೌಡ ಬೀಚನಹಳ್ಳಿ
ಅಮೃತ ಸೋಮೇಶ್ವರ
ಸಿ. ಆರ್. ಚಂದ್ರಶೇಖರ್
ಬಿ. ಎ. ಶ್ರೀಧರ
ಲಿಂಗದೇವರು ಹಳೆಮನೆ
ಭ. ಮಲ್ಲಿಕಾರ್ಜುನ
ಮಹಾಬಲೇಶ್ವರರಾವ್
ಭಕ್ತಪ್ರಿಯ
ಎಂ. ಪಿ. ಪರಮಶೇಖರಯ್ಯ
ಶ್ರೀಮತಿ ಉಷಾ ರಾಂಕುಮಾರ್

ಲೋಕಶಿಕ್ಷಣ ನಿರ್ದೇಶನಾಲಯ

ನವಸಾಕ್ಷರ ಪುಸ್ತಕ ಮಾಲೆ - ೧೭

ಕರಕುಶಲ ವಸ್ತುಗಳು

(ದಂತ ಗಂಧ ಬಿದಿರು)

ನಾ. ಡಿಸೋಜ




AKSHARA GRANTHALAYA
ACC.NO. 015559

ಪ್ರಸಾರಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ ೫೮೩ ೨೧೧

015559

KARAKUSHALA VASTUGALU : By Na. Desouza, Published by the Director of Prasaranga, Kannada University, Hampi - 583 211, Karnataka.
First Impression 1994, Pp. 28, Rs. 8-00

© Kannada University 1994

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ


ಪ್ರಕಾಶಕರು
ನಿರ್ದೇಶಕರು
ಪ್ರಸಾರಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮-೦೦

ಮುದ್ರಕರು
ಲಕ್ಷ್ಮಿ ಮುದ್ರಣಾಲಯ
ಚಾಮರಾಜಪೇಟೆ
ಬೆಂಗಳೂರು - ೧೮
ದೂರವಾಣಿ : ೬೬೧೩೧೨೩

374
DES



ಕರಕುಶಲ ವಸ್ತುಗಳು

(ದಂತ ಗಂಧ ಬಿದಿರು)

ಕರಕುಶಲತೆ

ಪ್ರಾಣಿಗಳನ್ನು ಮನುಷ್ಯರ ಜತೆ ಹೋಲಿಸಿದಾಗ ನಮಗೆ ಕೆಲವು ವ್ಯತ್ಯಾಸಗಳು ಕಾಣಿಸುತ್ತವೆ. ಮನುಷ್ಯ ನಗಬಲ್ಲ. ಮನುಷ್ಯ ಮಾತನಾಡಬಲ್ಲ. ಅವನು ತನ್ನ ಬುದ್ಧಿಶಕ್ತಿಯ ಬಲದಿಂದ ಹೊಸ ಸಂಶೋಧನೆಗಳನ್ನು ಮಾಡಬಲ್ಲ. ಈ ಯಾವ ಕೆಲಸಗಳನ್ನೂ ಪ್ರಾಣಿಪಕ್ಷಿಗಳು ಮಾಡಲಾರವು. ನೋಡಿ, ಕಾಗೆ ಶತಮಾನಗಳ ಹಿಂದೆ ಹೇಗೆ ಗೂಡು ಕಟ್ಟುತ್ತಿತ್ತೋ ಈಗಲೂ ಹಾಗೆಯೇ ಕಟ್ಟುತ್ತಿದೆ. ಆದರೆ ಮನುಷ್ಯ? ಗುಹೆಗಳಲ್ಲಿ ವಾಸಿಸುತ್ತಿದ್ದ. ಈಗ ಗಗನ ಚುಂಬಿಗಳಲ್ಲಿ ವಾಸಮಾಡುತ್ತಿದ್ದಾನೆ. ಪ್ರಾಣಿ ಮತ್ತು ಮನುಷ್ಯರಲ್ಲಿ ಮತ್ತೂ ಒಂದು ವ್ಯತ್ಯಾಸವಿದೆ. ಮನುಷ್ಯ ತಾನು ಮಾಡುವ ಎಲ್ಲ ಕೆಲಸಗಳಿಗೆ ತನ್ನ ಕೈಯನ್ನು ಬಳಸಬಲ್ಲ. ಪ್ರಾಣಿಗಳಿಗೆ ಕೈ ಇಲ್ಲ. ಆದರೆ ತಮ್ಮ ಮುಂಗಾಲನ್ನು ಪ್ರಾಣಿಗಳು ಕೈಗಳ ಹಾಗೆ ಬಳಸೋದುಂಟು.



ಕೆತ್ತನೆಯಲ್ಲಿ ನಿರತರಾಗಿರುವ ಕಲಾವಿದರು

ಅಳಿಲು ಹಣ್ಣನ್ನು ಮುಂಗಾಲಲ್ಲಿ ಹಿಡಿದು ತಿನ್ನುತ್ತದೆ. ಹುಲಿ, ಚಿರತೆ, ಸಿಂಹಗಳು ಮುಂಗಾಲಿನಿಂದ ತಮ್ಮ ಆಹಾರವನ್ನು ಹಿಡಿದುಕೊಳ್ಳುತ್ತವೆ. ನಾಯಿ ಮುಂಗಾಲನ್ನು ಚಾಚಿ ತನ್ನ ಪ್ರೀತಿಯನ್ನು ತೋರಿಸುತ್ತದೆ. ನಾಲ್ಕು ಕಾಲು ಇರೋ ಎಲ್ಲ ಪ್ರಾಣಿಗಳೂ ಹೀಗೆ ಮುಂಗಾಲುಗಳನ್ನು ಉಪಯೋಗಿಸುತ್ತವೆ. ಎರಡೇ ಕಾಲು ಇರೋ ಪಕ್ಷಿಗಳಿಗೆ ಆ ಅನುಕೂಲತೆ ಇಲ್ಲ. ಕೋತಿ ತನ್ನ ಮುಂಗಾಲುಗಳನ್ನು ಬೇರೆ ಬೇರೆ ರೀತಿಯಲ್ಲಿ ಉಪಯೋಗಿಸುತ್ತದೆ. ಕೋತಿ ಮಾನವನ ಮೂಲವಂಶಜ ಅನ್ನುತ್ತಾರೆ. ಹೀಗಾಗಿ ಮಾನವ ತನ್ನ ಎರಡೂ ಕೈಗಳ ಉಪಯೋಗವನ್ನು ಚೆನ್ನಾಗಿ ತಿಳಿದುಕೊಂಡಿದ್ದಾನೆ.

ಜಾದು ಮಾಡುವವರು ಯಾವುದೋ ದೇವತೆಯನ್ನು ವಶಮಾಡಿಕೊಂಡಿರುತ್ತಾರೆ ಅಂತ ಹೇಳೋದನ್ನ ಕೇಳಿರಬಹುದು. ಆದರೆ ಈ ಮಾತು ಸುಳ್ಳು. ಅವರು ಮಾಡೋದೆಲ್ಲ ಕೈ ಚಳಕ. ಕೈಯನ್ನೂ ಬೆರಳುಗಳನ್ನೂ ಚುರುಕಿನಿಂದ ಚಲಿಸುವುದರ ಮೂಲಕ ಅವರು ಅದ್ಭುತವನ್ನು ಮಾಡಿ ತೋರಿಸುತ್ತಾರೆ. ಕೈ ಬೊಗಸೇನಲ್ಲಿ ಒಂದು ಚಿಟಕಿ ಮಣ್ಣು ಹಾಕಿ ರೂಪಾಯಿ ನಾಣ್ಯವನ್ನು ಮೇಲೆ ಚಿಮ್ಮುತ್ತಾರೆ. ಇಸ್ಪೀಟ್ ಎಲೆಯನ್ನು ಮಾಯ ಮಾಡುತ್ತಾರೆ. ಇದೆಲ್ಲ ಕೈ ಚಳಕ. ಇದನ್ನು ಎಲ್ಲರ ಕೈಯಲ್ಲೂ ಮಾಡಲಿಕ್ಕೆ ಆಗೋದಿಲ್ಲ. ಇದಕ್ಕೆ ಜಾಣ್ಮೆ ಬೇಕು. ಚಾಕಚಕ್ಯತೆ ಬೇಕು. ಬಹಳ ಮುಖ್ಯವಾಗಿ ಕುಶಲತೆ ಬೇಕು.

ಈ ಜಾದೂಗಾರನ ಹಾಗೇ ಮತ್ತೂ ಕೆಲವರು ಕೈಯಿಂದ ಬೇರೆ ಕೆಲಸಗಳನ್ನು ಮಾಡಿ ತೋರಿಸುತ್ತಾರೆ. ಕೊಳಲು ನುಡಿಸೋದು, ವೀಣೆ ನುಡಿಸೋದು, ಸುಂದರವಾಗಿ ಹೂವಿನ ಮಾಲೆ ಪೋಣಿಸೋದು ಇತ್ಯಾದಿ . ಅಷ್ಟೇ ಏಕೆ ? ವಿಗ್ರಹಗಳನ್ನು ರಚಿಸೋದು, ರಂಗೋಲಿಯನ್ನು ಎಳೆ ಎಳೆಯಾಗಿ ಬಿಡಿಸೋದು, ಚಿತ್ರರಚನೆ ಇವೆಲ್ಲ ಕುಶಲತೆಯ ಕೆಲಸಗಳೆ.

ಈ ಕೆಲಸಗಳನ್ನು ಎಲ್ಲರೂ ಮಾಡುತ್ತಾರೆ ಅಂತ ಹೇಳಲಿಕ್ಕೆ ಆಗೋದಿಲ್ಲ. ಆಯಾ ವಿಷಯದಲ್ಲಿ ತರಬೇತಿ ಪಡೆದವರು ಮಾಡಬಲ್ಲ ಕೆಲಸಗಳು ಇವು.

ಮಣ್ಣಿನಿಂದ ಮಡಕೆ ಮಾಡೋದು ಕೆಲವರಿಗೆ ಬರುತ್ತದೆ. ಆದರೆ ಈ ಮಡಕೆ ಮೇಲೆ ಚಿತ್ತಾರ ಬರೆಯೋದು ಎಲ್ಲರಿಗೂ ಬರೋದಿಲ್ಲ. ಲೋಹದಲ್ಲಿ ಪಾತ್ರೆಗಳನ್ನು ಮಾಡುತ್ತಾರೆ. ಇದೇ ಲೋಹದಲ್ಲಿ ವಿಗ್ರಹಗಳನ್ನು ಮಾಡೋದು ಕೆಲವರ ಹವ್ಯಾಸ. ಹೀಗೇನೇ ಮರದಿಂದ, ಮಣ್ಣಿಂದ ಕಲ್ಲಿನಿಂದ ಬೇರೆ ಬೇರೆ ವಸ್ತುಗಳಿಂದ ಕಲಾಕೃತಿಗಳನ್ನು ಮಾಡೋದು ಕೂಡ ಒಂದು ಕಲೆಯೆ ಈ ಕಲೆಯನ್ನು 'ಕರಕುಶಲ ಕಲೆ' ಅಂತ ಕರೀತಾರೆ. ಈ ಕಲಾಕೃತಿಗಳನ್ನು ಮಾಡಲಿಕ್ಕೆ ಬೇಕಾದ ವಸ್ತುಗಳನ್ನ 'ಕರಕುಶಲ ವಸ್ತುಗಳು' ಅಂತ ಕರೀತಾರೆ.

ಮನುಷ್ಯ ತನ್ನ ಸುತ್ತ ಇರೋ ಸಾಮಗ್ರಿಗಳನ್ನೇ ಯಾವತ್ತೂ ಉಪಯೋಗಿಸುತ್ತಾ ಬಂದಿದ್ದಾನೆ. ಗುಹೆಗಳಲ್ಲಿ ವಾಸ ಮಾಡುತ್ತಿದ್ದೋನು ಕಲ್ಲಿನಿಂದ ಆಯುಧಗಳನ್ನು ಮಾಡಿಕೊಂಡ. ಕ್ರಮೇಣ ಮರವನ್ನು ಬಳಕೆಗೆ ತಂದು ಕೊಂಡ. ಕಲ್ಲನ್ನು ಕೆತ್ತಿದ. ಮಣ್ಣನ್ನ ಮುದ್ದೆ ಮಾಡಿ ಮಡಕೆ ಮಾಡಿದ. ನಿಧಾನವಾಗಿ ನಯವಾದ ಸಲಕರಣೆಗಳನ್ನು ಸಿದ್ಧಪಡಿಸಿಕೊಂಡ. ಮರದ ಕೆತ್ತನೆ ಪ್ರಾರಂಭಿಸಿದಾಗ ಮರದಲ್ಲೇ ಉತ್ತಮವಾದ ಮರಗಳನ್ನು ಹುಡುಕಿದ. ಕೆತ್ತನೆ ಕೆಲಸಕ್ಕೆ ಮರ, ಕಲ್ಲು ಬಿಟ್ಟು ಬೇರೆ ಏನಾದರೂ ಸಿಗಬಹುದೇ ಎಂದು ನೋಡಿದ. ಕಾಡಿನಲ್ಲಿ ಬೆಳೀತಾ ಇದ್ದ ಇತರೆ ವಸ್ತುಗಳನ್ನು ಹುಡುಕಿದ. ಆಗ ಆವನಿಗೆ ಸಿಕ್ಕಿದ್ದು ದಂತ ಗಂಧ ಬಿದಿರು.

ದಂತ ಗಂಧ ಬಿದಿರು ಮೂರೂ ಕಾಡಿನ ಉತ್ಪನ್ನಗಳೇ.

ದಂತ

ಭಾರತ ಮತ್ತು ಆಫ್ರಿಕಾ ದೇಶಗಳು ಆನೆಗಳಿಗೆ ಪ್ರಖ್ಯಾತವಾದುವು. ಆನೆಗಳು ಸಸ್ಯಾಹಾರಿ ಜೀವಿಗಳು. ಆದರೆ ಪ್ರಾಣಿಗಳಲ್ಲಿಯೇ ಬಲಿಷ್ಠವಾದವು. ಮಾನವ ಇವುಗಳ ಮೂಲಕ ಕಷ್ಟಕರವೆನಿಸುವ ಕೆಲಸಗಳನ್ನು ಮಾಡಿಸುತ್ತ ಬಂದಿದ್ದಾನೆ. ಇದರ ದಂತಕ್ಕೂ ಬೆಲೆ ಇದೆ. ಆನೆ ಸತ್ತ ನಂತರ ಇದರ ದಂತ ದೊರೆಯುತ್ತದೆ. ಈ ಕಾರಣದಿಂದಾಗಿ ''ಆನೆ ಇದ್ದರೂ ಸಾವಿರ, ಸತ್ತರೂ ಸಾವಿರ' ಎಂಬ ಗಾದೆ ಹುಟ್ಟಿಕೊಂಡಿದೆ.

ಆನೆ ಆರರಿಂದ ಹನ್ನೊಂದು ಅಡಿಗಳಷ್ಟು ಎತ್ತರವಾಗಿರುತ್ತದೆ. ಇದರ ತೂಕ ಏಳು ಸಾವಿರದಿಂದ ಒಂಬತ್ತು ಸಾವಿರ ಪೌಂಡ್. ಸಾಮಾನ್ಯವಾಗಿ ಇದರ ದಂತ ಆರು ಅಡಿಗಳಷ್ಟು ಉದ್ದವಿರುತ್ತದೆ. ಆನೆಯ ದಂತವೆಂದರೆ ಅದರ ಎರಡು ಕೋರೆದಾಡೆಗಳು. ಇದರ ತೂಕ ಸುಮಾರು ನೂರಾ ಐವತ್ತು ಪೌಂಡ್. ಇದು ತಿಳಿಹಳದಿ ಬಣ್ಣದ್ದಾಗಿರುತ್ತದೆ. ಇದು ಎಲುಬೂ ಅಲ್ಲ. ಕೊಂಬೂ ಅಲ್ಲ. ಇದರದ್ದೇ ಒಂದು ವಿಶೇಷ. ಇದು ಗಟ್ಟಿಯಾದರೂ ಕಬ್ಬಿಣದ ಚಾಣಗಳ ಪಾಲಿಗೆ ಮೆದು.

ಆನೆಯ ದಂತವನ್ನು ಕೆತ್ತನೆಯ ಕೆಲಸಗಳಿಗೆ ಬಳಸುವುದು ಹಿಂದಿನಿಂದಲೂ ನಡೆದು ಬಂದಿದೆ. ಚೀನಾ, ಜಪಾನ್, ಈಜಿಪ್ಟ್ ಬೆಬಿಲೋನಿಯ ದೇಶಗಳಲ್ಲಿ ಪ್ರಾಚೀನ ದಂತದ ಕಲಾಕೃತಿಗಳನ್ನು ನೋಡ



ದಂತದ ಫಲಕ

ಬಹುದು. ಮೂರು ಸಾವಿರ ವರ್ಷ ಗಳಿಂದ ಈ ಕೆಲಸ ಮಾಡುತ್ತಾ ಬಂದಿರುವವರು ಚೀನಾ ದೇಶದವರು. ಚೀನಾ ದೇಶದವರ ದಂತದ ಕೆತ್ತನೆ ಕೆಲಸ ನಾಜೂಕಿನದು. ಇಡೀ ಒಂದು ಕೋರೆ ದಾಡಿಯನ್ನೇ ಒಳಗೆಲ್ಲಾ ಕೊರೆದು ಟೊಳ್ಳಾಗಿಸಿ ಹೊರಗವಚದ ಮೇಲೆ ಸುಂದರ ಕಲಾಕೃತಿಯೊಂದನ್ನು ಇವರು ಕೆತ್ತಿರುವುದುಂಟು. ಚೀನಾದ ಓರ್ವ ವೃದ್ಧ ಭಿಕ್ಷು. ಅವನ ಸುತ್ತ ಅವನ ಶಿಷ್ಯರು. ಹಬ್ಬಿರುವ ಬಳ್ಳಿಗಳು. ಪ್ರಾಣಿ ಪಕ್ಷಿಗಳು. ಮರ ಗುಡ್ಡ. ಇದನ್ನೆಲ್ಲ ಒಂದೇ ದಂತದಲ್ಲಿ ಒಳಗಿನ ತಿರುಳು ತೆಗೆದು ಮಾಡಿದ್ದಾರೆ. ಎಲ್ಲೂ ತಪ್ಪಿಲ್ಲ. ಒಂದೂ ಕುಂದಿಲ್ಲ. ಇದನ್ನೇ ''ಕರಕುಶಲತೆ'' ಅನ್ನುವುದು.

ಜಪಾನ್ ದೇಶದವರೂ ಕೂಡ ಈ ಕಾರ್ಯದಲ್ಲಿ ಮುಂದೆಯಿದ್ದಾರೆ.

ಆಫ್ರಿಕಾ ದೇಶದ ದಂತಕ್ಕೆ ವಿದೇಶಗಳಲ್ಲಿ ತುಂಬಾ ಬೇಡಿಕೆ. ಆಫ್ರಿಕಾ ದೇಶದ ದಂತ ಅಚ್ಚಬಿಳಿ ಬಣ್ಣದ್ದಾಗಿರುತ್ತದೆ.

ಭಾರತಕ್ಕೆ ಬಂದರೆ ಕೇರಳ, ರಾಜಸ್ಥಾನ, ಗುಜರಾತ, ಪಂಜಾಬ್‌ಗಳಲ್ಲಿ ದಂತವನ್ನು ಬಳಸುತ್ತಾರೆ. ಕೇರಳದ ಕಲಾವಿದರು ದಂತದ ಚಿತ್ತಾಕರ್ಷಕ ವಸ್ತುಗಳನ್ನು ತಯಾರಿಸುತ್ತಾರೆ. ದಂತದ ಫಲಕಗಳ ಮೇಲೆ ಆಕರ್ಷಕ ಚಿತ್ರಗಳನ್ನು ಇವರು ಬರೆಯುತ್ತಾರೆ. ಬಳೆ, ಉಂಗುರ, ಸೆಂಟ್‌ಬಾಟಲಿಗಳನ್ನು ದೆಹಲಿಯ ಕಲಾವಿದರು ದಂತದಿಂದ ತಯಾರಿಸುತ್ತಾರೆ. ಪಂಜಾಬಿನಿಂದ ದಂತದ ವಸ್ತುಗಳು ವಿದೇಶಕ್ಕೂ ಹೋಗುತ್ತವೆ.

ಕರ್ನಾಟಕದಲ್ಲಿ ದಂತದ ಕೆಲಸ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ವಿಶೇಷವಾಗಿ ಇಲ್ಲಿಯ ರಾಜ ಮಹಾರಾಜರುಗಳು ಇದರ ಪ್ರೋತ್ಸಾಹಕ ರಾಗಿದ್ದರು. ಅರಮನೆಗಳಲ್ಲಿ ಇದ್ದ ಆನೆಗಳು ಸತ್ತನಂತರ ಅವುಗಳ ದಂತಗಳಿಂದ ಕಲಾಕೃತಿಗಳನ್ನು ಕೆತ್ತಿಸುತ್ತಿದ್ದರು. ಕರ್ನಾಟಕದ ಮಠಗಳಲ್ಲೂ ಆನೆಗಳು ಇರುತ್ತಿದ್ದವು. ಮಠಗಳಲ್ಲೂ ದಂತದ ಕೆತ್ತನೆ ಕೆಲಸಗಳನ್ನು ಮಾಡಿಸಿದ ಉದಾಹರಣೆಗಳಿವೆ.

ಗುಜರಾತ ದೇಶದಲ್ಲಿ ಬ್ರಹ್ಮಕ್ಷತ್ರಿಯ ಎಂಬ ಒಂದು ಜನಾಂಗವಿದೆ. ಇವರು ದಂತದ ವಸ್ತುಗಳನ್ನು ನಿರ್ಮಿಸುತ್ತಾರೆ. ಕರ್ನಾಟಕದಲ್ಲಿ ಗುಡಿಗಾರರಿದ್ದಾರೆ. ಇವರು ಶ್ರೀಗಂಧ ಮತ್ತು ದಂತದಲ್ಲಿ ಅಮೂಲ್ಯ ಕಲಾಕೃತಿಗಳನ್ನು ರಚಿಸುತ್ತಾರೆ.

ದಂತ ಎಂದರೆ ಆನೆಯ ಕೋರೆದಾಡೆ ಎಂದು ಮೊದಲೇ ಹೇಳಿದೆ. ಅಲ್ಲದೆ ಹೊರಗೆ ನಾವು ಕಾಣುವ ಭಾಗ ಮಾತ್ರ ಗಟ್ಟಿ. ಮಾಂಸದ ಒಳಗೆ ಸೇರಿಕೊಂಡಿರುವ ಭಾಗ ಟೊಳ್ಳು. ಹೀಗಾಗಿ ಹೊರಗಿನ ಭಾಗವನ್ನು ಕೆತ್ತನೆಗೆ ಉಪಯೋಗಿಸಿಕೊಳ್ಳಬಹುದು.

ದಂತ ನಿಮಗೆ ಗೊತ್ತಿರುವ ಹಾಗೆ ತುಸು ಬಾಗಿಕೊಂಡಿರುತ್ತದೆ. ದುಂಡಗಿರುತ್ತದೆ. ಮೇಲೆ ದಪ್ಪವಾಗಿ ತುದಿಯಕಡೆ ಹೋದ ಹಾಗೆ ಸಪೂರ ಇರುತ್ತದೆ. ಕೆತ್ತಬೇಕು ಎಂದಿರುವ ಆಕೃತಿಗೆ ಅನುಗುಣವಾಗಿ ಇದನ್ನು ಕತ್ತರಿಸುತ್ತಾರೆ. ಉದ್ದ, ಗಿಡ್ಡ ಚೌಕಾಕಾರದ ತುಂಡುಗಳನ್ನು ಮಾಡಿಕೊಳ್ಳುತ್ತಾರೆ. ಗೇಣಗಲದ ಹಲಗೆಗಳನ್ನೂ ಮಾಡಿಕೊಳ್ಳುವುದುಂಟು.

ಈಗ ಮುಂದಿನ ಕೆಲಸ. ಕಲಾವಿದರು ದಂತದ ಈ ತುಂಡಿನ ಮೇಲೆ, ಹಲಗೆಯ ಮೇಲೆ ಪೆನ್ಸಿಲಿನಿಂದ ಚಿತ್ರ ಬರೆಯುತ್ತಾರೆ. ಈ ಚಿತ್ರ, ಮುಂದೆ ಅವರು ಚಿತ್ರ ಕೆತ್ತಬೇಕಾದ ವಿಗ್ರಹದ ಗಣಪತಿ, ಕೃಷ್ಣ, ಏಸುಕ್ರಿಸ್ತ, ಈಶ್ವರ ಮುಂತಾದ ಆಕಾರ ಅಲ್ಲಿ ಮೂಡುತ್ತದೆ. ನಂತರ ಸಣ್ಣ ಸಣ್ಣ ಚಾಣಗಳನ್ನು ತೆಗೆದುಕೊಂಡು ಅವರು ಕೆಲಸ ಮುಂದುವರಿಸುತ್ತಾರೆ. ಗುಡಿಗಾರರು ಈ ಚಾಣಗಳನ್ನು 'ಚೀರ್ಣ' ಎಂದು ಕರೆಯುತ್ತಾರೆ.

ಕೈಯಲ್ಲಿ ಲೇಖಣಿ ಹಿಡಿದ ಹಾಗೆ ಚೀರ್ಣ ಹಿಡಿದು ಗೆರೆಯ ಹೊರಭಾಗವನ್ನು ಮೃದುವಾಗಿ ಮೀಟುತ್ತಾರೆ. ದಂತ ರವೆರವೆಯಾಗಿ ಏಳುತ್ತದೆ. ಬೆಳ್ಳುಳ್ಳಿಯ ಸಿಪ್ಪೆಯಂತೆ ಹೊರ ಬರುತ್ತದೆ. ನಿಧಾನವಾಗಿ ದಂತದ ತುಂಡಿನಲ್ಲಿ ಒಂದು ವಿಗ್ರಹ ಕಾಣಿಸುತ್ತದೆ. ಅಸ್ಪಷ್ಟವಾಗಿ ಇದ್ದಿದ್ದು ಕ್ರಮೇಣ ಸ್ಪಷ್ಟವಾಗುತ್ತದೆ.

ಪೆನ್ಸಿಲ್ಲಿನ ಗುರುತು ಅಳಿಸಿ ಹೋಗುತ್ತದೆ. ಕಲಾವಿದ ಮತ್ತೂ ಬೇರೆ ಬೇರೆ ಅಳತೆಯ ಚೀರ್ಣಗಳನ್ನು ಕೈಗೆತ್ತಿಕೊಳ್ಳುತ್ತಾನೆ. ವಿಗ್ರಹದ ಉಡುಪು, ಆಭರಣ, ಕಣ್ಣು ಕಿವಿ, ತುಟಿಗಳೆಲ್ಲ ಮೂಡುತ್ತವೆ. ತುಂಡಿನಂತಿದ್ದ ದಂತಕ್ಕೆ ಜೀವ ಬರುತ್ತದೆ. ಈಗ ಅದು ಸಂಪೂರ್ಣವಾದ ಕಲಾಕೃತಿ. ಒಂದು ವಿಗ್ರಹ. ಒಂದು ಪ್ರತಿಮೆ.

ದಂತದಿಂದ ಸಿಗರೇಟು ಪೆಟ್ಟಿಗೆ, ಬಳೆ, ಆಭರಣದ ಕರಂಡಕ ವಾಕಿಂಗ್ ಸ್ಟಿಕ್ ಮೊದಲಾದುವನ್ನು ಮಾಡುತ್ತಾರೆ.


ಕರ್ನಾಟಕದಲ್ಲಿ ಅತ್ಯಮೂಲ್ಯವಾದ ಒಂದು ದಂತದ ಸಿಂಹಾಸನವಿದೆ. ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನಲ್ಲಿ ಒಂದು ಮಠವಿದೆ. ಅದರ ಹೆಸರು ರಾಮಚಂದ್ರಾಪುರ ಮಠ. ಈ ಮಠದಲ್ಲಿದ್ದ ಆನೆಗಳು ಸತ್ತುಹೋದ ನಂತರ ಸುಮಾರು ಎರಡು ನೂರು ಕೆ.ಜಿ. ದಂತವನ್ನು ಮಠದಲ್ಲಿ ಸಂಗ್ರಹಿಸಿ ಇಡಲಾಯಿತು. ಈ ದಂತವನ್ನು ತೆಗೆದುಕೊಂಡು ಇಪ್ಪತ್ತು ಜನ ಗುಡಿಗಾರರು ಈ ಸಿಂಹಾಸನವನ್ನು ಕೆತ್ತಿದ್ದಾರೆ. ಸಿಂಹಾಸನವನ್ನು ಮಾಡಿ ಮುಗಿಸಲು ತೆಗೆದುಕೊಂಡ ಅವಧಿ ಹದಿನೆಂಟು ವರುಷ. ಈ ಸಿಂಹಾಸನದ ಬೆಲೆ ಈಗ ಮೂರು ಕೋಟಿ ಎಂದು ಹೇಳುತ್ತಾರೆ.

ದಿವಂಗತ ಮೂಡುಗೋಡು ಹಿರಣ್ಯಪ್ಪ ಸೊರಬ ತಾಲ್ಲೂಕಿನವರು. ಇವರನ್ನು ಆಚಾರ್ಯ ಪುರುಷರೆಂದು ಗುಡಿಗಾರರು ಕರೆಯುತ್ತಾರೆ. ಶ್ರೀಗಂಧದಲ್ಲಿ, ದಂತದಲ್ಲಿ ಕೆಲಸ ಮಾಡುವುದರಲ್ಲಿ ಇವರು ನಿಪುಣರು. ದಂತದ ಸಿಂಹಾಸನ ಇವರದ್ದೇ ಸೃಷ್ಟಿ.

ಒಂದು ಪೀಠ. ಹಿಂದೆ ಪ್ರಭಾವಳಿಯಿಂದ ದಂತದ ಸಿಂಹಾಸನ ಕೂಡಿದೆ. ಪ್ರಭಾವಳಿಯಲ್ಲಿ ಪೀಠದ ಮೂರೂ ಕಡೆ ರಾಮಾಯಣ ಮಹಾಭಾರತವನ್ನು ಕೆತ್ತಲಾಗಿದೆ. ದಂತವನ್ನು ಫಲಕಗಳಂತೆ ಕತ್ತರಿಸಿಕೊಂಡು ಅದರ ಮೇಲೆ ಪೌರಾಣಿಕ ಪ್ರಸಂಗಗಳನ್ನ ಬಿಡಿಸಲಾಗಿದೆ. ತುಂಬಾ ನಾಜೂಕಿನ, ಸೂಕ್ಷ್ಮವಾದ ಕೆಲಸ. ಶ್ರೀರಾಮ ಪಟ್ಟಾಭಿಷೇಕ ಪ್ರಭಾವಳಿಯ ನಡುವಿನ ಫಲಕದಲ್ಲಿದೆ.



ಶ್ರೀ ಮೂಡುಗೋಡು ಹಿರಣ್ಯಪ್ಪ - ಕೆತ್ತನೆ ಕಲಾವಿದ ಆಚಾರ್ಯ ಪುರುಷ



ದಂತದ ಸಿಂಹಾಸನ

ಮೂಡುಗೋಡು ಹಿರಣ್ಯಪ್ಪನವರು ಮೈಸೂರು ಅರಮನೆಗಾಗಿ ಹಲವು ದಂತದ ಕಲಾಕೃತಿಗಳನ್ನು ಮಾಡಿಕೊಟ್ಟಿದ್ದರು.

ದಂತ ಈಗ ಸಿಗುವುದಿಲ್ಲ. ಹಿಂದೆ ಕರ್ನಾಟಕದ ಗುಡಿಗಾರರು ದಂತವನ್ನು ಕೊಡಗಿನಿಂದ ಕೊಂಡು ತರುತ್ತಿದ್ದರು. ಅನಂತರ ಸರಕಾರವೇ ಗುಡಿಗಾರರಿಗೆ ದಂತವನ್ನು ಸರಬರಾಜು ಮಾಡುತ್ತಿತ್ತು. ದಂತದ ಬೆಲೆ ಕೆ.ಜಿ.ಗೆ ಎರಡು ಮೂರು ಸಾವಿರವಾಯಿತು. ಬರಬರುತ್ತಾ ದಂತ ಸಿಗುವುದಿಲ್ಲ ಎಂದಾಯಿತು. ದಂತಕ್ಕೆ ತುಂಬಾ ಬೆಲೆ ಬಂದುದರಿಂದ ಕಾಡಾನೆಗಳ ಕೊಲೆ ಹೆಚ್ಚಾಯಿತು. ದಂತದ ಕಳ್ಳರು ಆನೆಗಳನ್ನು ಕೊಂದು ದಂತವನ್ನು ಅಪಹರಿಸಿ ಮಾರತೊಡಗಿದರು.

ಈಗ ದಂತದ ವಸ್ತುಗಳನ್ನೇ ಮಾರಬಾರದು ಎಂಬ ಕಾನೂನು ಬಂದಿದೆ. ಆನೆಗೆ ದಂತ ಇದ್ದರೆ ಚೆನ್ನ. ಆದರೆ ಈ ದಂತವೇ ಆನೆಗೆ ಮುಳುವಾಯಿತು. ಆದ್ದರಿಂದ, ಹೀಗೊಂದು ಕಾನೂನು ಜಾರಿಗೆ ಬಂದಿತು. ಈಗ ದಂತ ಅಪರೂಪದ ವಸ್ತು. ದಂತದ ಕಲಾಕೃತಿಗಳು ನೋಡಲೂ ಸಿಗುವುದಿಲ್ಲ. ದಂತವನ್ನೇ ಹೋಲುವ ಪ್ಲಾಸ್ಟಿಕ್ ವಸ್ತುಗಳು ಬರುತ್ತಿವೆ. ಆದರೆ ದಂತ ದಂತವೇ. ಅದಕ್ಕ ಸರಿಸಾಟಿಯಾಧ ಬೇರೆ ವಸ್ತು ಇಲ್ಲ. ಅಲ್ಲವೆ ?

* * *

ಶ್ರೀಗಂಧ

ಮೈಸೂರನ್ನು ಹಿಂದೆ ಗಂಧದ ಗೂಡು ಎಂದು ಕರೆಯುತ್ತಿದ್ದರು. ಮೈಸೂರು ಮಾಯವಾಗಿ ಈಗ ನಮ್ಮ ನಾಡು ಕರ್ನಾಟಕವಾಗಿದೆ. ಕರ್ನಾಟಕ ಕೂಡ ಈಗ ಗಂಧದ ಗೂಡೇ.

ಮರಗಳಲ್ಲಿಯೇ ಶ್ರೀಗಂಧ ವಿಶೇಷವಾದದ್ದು. ಏಕೆಂದರೆ ಈ ಮರ ಪರಿಮಳ ಬೀರುತ್ತದೆ. ಬೇರೆ ಕೆಲವು ಮರಗಳಿಂದ ಒಸರುವ ಅಂಟಿನಿಂದ, ಹಾಲಿನಿಂದ ಪರಿಮಳದ ವಸ್ತುಗಳನ್ನು ತಯಾರಿಸುತ್ತಾರೆ. ಈ ಮರ ಹಾಗಲ್ಲ. ಇಡೀ ಮರವೇ ಪರಿಮಳಯುಕ್ತ.

ಹೊರದೇಶಗಳಲ್ಲಿ ಅಂದರೆ ಇಂಡೋನೇಷಿಯ, ಆಸ್ಟ್ರೇಲಿಯಾ ಜಾವಾಗಳಲ್ಲಿಯೂ ಶ್ರೀಗಂಧ ಬೆಳೆಯುತ್ತದೆ. ಭಾರತದಲ್ಲಿ ತಮಿಳುನಾಡು, ಕೇರಳ, ಆಂಧ್ರಗಳಲ್ಲಿ ಶ್ರೀಗಂಧವನ್ನು ಬೆಳೆಯುತ್ತಾರೆ. ಆದರೆ ಈ ಎಲ್ಲ ರಾಜ್ಯಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಶ್ರೀಗಂಧ ಬೆಳೆಯುವುದು ಕರ್ನಾಟಕದಲ್ಲಿ.

ಶ್ರೀಗಂಧ ಬೆಳೆಯಲು ಯಾವುದೇ ಒಂದು ಬಗೆಯ ಮಣ್ಣು ಬೇಕೆಂದಿಲ್ಲ. ಇದು ಎರೆಮಣ್ಣಿನಲ್ಲಿ, ಚೌಳು ಭೂಮಿಯಲ್ಲೂ ಬೆಳೆಯುತ್ತದೆ. ದಟ್ಟವಾದ ಕಾಡಿನಲ್ಲಿ ಬೆಳೆಯುತ್ತದೆ. ಕುರುಚಲು ಗಿಡಗಳ ನಡುವೆ ಶ್ರೀಗಂಧ ಬೆಳೆಯುತ್ತದೆ. ಹೊಲದ ಹತ್ತಿರ, ಬಯಲಿನಲ್ಲಿ, ಹಳ್ಳದ ಸಮೀಪ ಬೆಳೆಯುತ್ತದೆ. ಶ್ರೀಗಂಧದ ಮರದ ಎತ್ತರ ಸಾಮಾನ್ಯವಾಗಿ ಇಪ್ಪತ್ತೈದು ಅಡಿ, ದಪ್ಪ ಮೂವತ್ತು ಅಂಗುಲ. ನಲವತ್ತು ಅಡಿ ಎತ್ತರದ ಮರಗಳೂ ದೊರಕಿವೆ. ಮರದ ನಡುವಣ ಭಾಗ, ಇದರ ಬೇರುಗಳು ಸುವಾಸನೆಯಿಂದ ಕೂಡಿರುತ್ತವೆ. ಮರ ಹಳೆಯದಾದಷ್ಟೂ ಸುವಾಸನೆ ಹೆಚ್ಚು.

ಕೋಗಿಲೆಗೂ ಶ್ರೀಗಂಧಕ್ಕೂ ಸ್ನೇಹ. ಹೇಗೆಂದರೆ ಶ್ರೀಗಂಧದ ಮರದಲ್ಲಿ ಬಿಡುವ ಹಣ್ಣುಗಳು ಕೋಗಿಲೆಗೆ ಪ್ರಿಯ. ಈ ಹಣ್ಣಿನ ಒಳಗಿನ ತಿರುಳನ್ನು ಕೋಗಿಲೆ



ಶ್ರೀಗಂಧದ ಬೀಸಣಿಕೆ

015559

ಪ್ರೀತಿಸುತ್ತದೆ. ಕೋಗಿಲೆಗಳು ಹಣ್ಣನ್ನು ಸೇವಿಸಿ ಅಲ್ಲಲ್ಲಿ ಹಿಕ್ಕೆ ಹಾಕುತ್ತವೆ. ಈ ಹಿಕ್ಕೆಯಲ್ಲಿದ್ದ ಶ್ರೀಗಂಧದ ಬೀಜ ಒಂದೇ ದಿನದಲ್ಲಿ ಮೊಳಕೆಯೊಡೆಯುತ್ತದೆ.

ಶ್ರೀಗಂಧ ಮತ್ತೂ ಒಂದು ವೈಶಿಷ್ಟ್ಯವನ್ನು ಹೊಂದಿದೆ. ಇದು ಅರೆಪರಾವಲಂಬಿ ಸಸ್ಯ. ಅಂದರೆ ತನಗೆ ಬೇಕಾದ ಆಹಾರಕ್ಕಾಗಿ ಇದು ಬೇರೆ ಮರಗಳನ್ನು ಅವಲಂಬಿಸುತ್ತದೆ. ತನ್ನ ಬೇರುಗಳನ್ನು ಬೇರೆ ಮರಗಳ ಬೇರಿಗೆ ಅಂಟಿಸಿ ಅಲ್ಲಿಂದ ಆಹಾರವನ್ನು ಹೀರಿಕೊಳ್ಳುತ್ತದೆ. ಕಾಡಿನಲ್ಲಿ ಬೆಳೆಯುವ ಬೇವು, ಹೊಂಗೆ ಮೊದಲಾದ ಗಿಡಗಳನ್ನು ಇದು ಆಶ್ರಯಿಸುತ್ತದೆ. ಕೊನೆಗೆ ಹುಲ್ಲಿನಂತಹಾ ಸಣ್ಣ ಸಸ್ಯಗಳಿಂದಲೂ ಇದು ನೆರವನ್ನು ಪಡೆಯುತ್ತದೆ.

ಹಿಂದೆ ಕರ್ನಾಟಕದಲ್ಲಿ ಶ್ರೀಗಂಧ ಅಧಿಕವಾಗಿ ಬೆಳೆಯುತ್ತಿತ್ತು. ಈಗ ಇದರ ಪ್ರಮಾಣ ಕಡಿಮೆಯಾಗಿದೆ. ಕರ್ನಾಟಕದಿಂದ ಜರ್ಮನ್ ದೇಶಕ್ಕೆ ಕೂಡ ಶ್ರೀಗಂಧವನ್ನು ಸರಬರಾಜು ಮಾಡಲಾಗುತ್ತಿತ್ತು.

ಶ್ರೀಗಂಧವನ್ನು ರೈತರು ಬೆಳೆದರೆ ಬೇಗನೆ ಲಕ್ಷಾಧಿಪತಿಗಳಾಗಬಲ್ಲರು. ಆದರೆ ಇದು ಸರಕಾರಿ ಬೆಳೆ. ಖಾಸಗಿಯಾಗಿ ಬೆಳೆಸಲು ತೊಂದರೆಗಳಿವೆ. ಸರಕಾರದ ಕಾನೂನುಗಳು ಅಡ್ಡ ಬರುತ್ತವೆ. ಶ್ರೀಗಂಧಕ್ಕೆ ಬಹಳ ಬೇಡಿಕೆ ಇರುವುದರಿಂದ ಇದು ಕಳ್ಳತನದಲ್ಲಿ ಮಾರಾಟವಾಗುತ್ತದೆ. "ಶ್ರೀಗಂಧ ಸಾಗಿಸುವ ಕಳ್ಳರನ್ನು ಹಿಡಿದರು" "ಶ್ರೀಗಂಧದ ಕೊರಡು ತುಂಬಿದ ವಾಹನ ಹಿಡಿದರು" - ಎಂಬ ಸುದ್ದಿ ನಮಗೆ ನಿತ್ಯ ಪತ್ರಿಕೆಗಳಲ್ಲಿ ಕಾಣಸಿಗುತ್ತದೆ.

ಶ್ರೀಗಂಧದಲ್ಲಿ ನಾಲ್ಕು ಜಾತಿಗಳನ್ನು ಗುರುತಿಸುತ್ತಾರೆ. ಬಿಳಿಗಂಧ, ಕೆಂಪು ಗಂಧ, ನಾಗಗಂಧ ಮತ್ತು ನವಿಲುಗಂಧ. ನಾಗಗಂಧ ಕೊಂಚ ಕಪ್ಪು ಬಣ್ಣ ದಲ್ಲಿರುತ್ತದೆ. ಉಳಿದದ್ದು ತಿಳಿ ಹಳದಿಬಣ್ಣದ್ದು.

ಶ್ರೀಗಂಧವನ್ನು ತೇಯ್ದು ಉಪಯೋಗಿಸುವುದು ಎಲ್ಲರಿಗೂ ಗೊತ್ತಿದೆ. ಕರ್ನಾಟಕದಲ್ಲಿ ಶ್ರೀಗಂಧದ ಎಣ್ಣೆಯನ್ನು ತಯಾರಿಸುವ ಕಾರ್ಖಾನೆಗಳಿವೆ. ಶ್ರೀಗಂಧದ

ಸೋಪು ನಮ್ಮಲ್ಲಿ ದೊರೆಯುತ್ತದೆ. ಊದುಬತ್ತಿ ಸುಗಂಧ ದ್ರವ್ಯಗಳಿಗೆ ಗಂಧದ ಎಣ್ಣೆಯನ್ನು ಬಳಸುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ಶ್ರೀಗಂಧದ ಮರವನ್ನು ವಿಗ್ರಹಗಳನ್ನು ಮಾಡಲು ಉಪಯೋಗಿಸುತ್ತಾರೆ.

ಕೆತ್ತನೆ ಕೆಲಸಕ್ಕೆ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಮರಗಳನ್ನು ಉಪಯೋಗಿಸುತ್ತಾರೆ. ಕಾಶ್ಮೀರದಲ್ಲಿ ಮೃದುವಾದ ದೇವದಾರು, ಉತ್ತರ ಪ್ರದೇಶದಲ್ಲಿ ದೂಧಿ, ಸೀಸವು ಎಂಬ ಮರ. ತಮಿಳು ನಾಡಿನಲ್ಲಿ ಕವಾಡಿ. ಆಂಧ್ರ ಪ್ರದೇಶದಲ್ಲಿ ಚಂದನ ಇತ್ಯಾದಿ.

ಕರ್ನಾಟಕದಲ್ಲಿ ಚಂದನ, ಕರೀಮರ, ತೇಗಗಳನ್ನೂ ಉಪಯೋಗಿಸುತ್ತಾರೆ. ಶ್ರೀಗಂಧಕ್ಕೆ ಬಣ್ಣ ವಾಸನೆ ಇರುವುದರಿಂದ ಇದನ್ನು ವಿಶೇಷವಾಗಿ ಸುಗಂಧ ದ್ರವ್ಯಗಳಲ್ಲಿ ಉಪಯೋಗಿಸುತ್ತಾರೆ. ಇದರಲ್ಲಿ ಎಣ್ಣೆಯ ಅಂಶ ಇರುತ್ತದೆ. ಮರ ಮೃದುವಾಗಿ ಇರುತ್ತದೆ. ಕೆತ್ತನೆ ಕೆಲಸ ಮಾಡುವವರಿಗೆ ಈ ಮರದಲ್ಲಿ ಕೆಲಸಮಾಡಲು ಸಂತೋಷವಾಗುತ್ತದೆ.

ಶ್ರೀಗಂಧದಲ್ಲಿ ಯಾವ ಆಕಾರದ ವಿಗ್ರಹಗಳನ್ನು ಬೇಕಾದರೂ ಮಾಡ ಬಹುದು. ಮುಖ್ಯವಾಗಿ ಆ ಗಾತ್ರದ ಮರ ಸಿಗಬೇಕು ಅಷ್ಟೆ. ಮರ ಸಿಕ್ಕ ನಂತರ ಅದನ್ನು ಬೇಕಾದ ಆಕಾರದಲ್ಲಿ ಕತ್ತರಿಸಿಕೊಳ್ಳುತ್ತಾರೆ. ಉಜ್ಜುಗೊರಡು ಹೊಡೆದು ನಯಮಾಡಿಕೊಳ್ಳುತ್ತಾರೆ. ಅನಂತರ ಕೆತ್ತಬೇಕಾದ ವಿಗ್ರಹದ ಚಿತ್ರವನ್ನು ಪೆನ್ಸಿಲಿನಿಂಧ ಅದರ ಮೇಲೆ ಬರೆದುಕೊಳ್ಳುತ್ತಾರೆ. ಮುಂದಿನ ಕೆಲಸವೆಂದರೆ ಕೆತ್ತುವುದು. ಶ್ರೀಗಂಧದ ಕೆತ್ತನೆ ಕೆಲಸಗಾರರು ಕೂಡ ಗುಡಿಗಾರರೇ. ಈಗೀಗ ಬೇರೆ ಜನಾಂಗಗಳವರೂ ಈ ಕೆಲಸವನ್ನು ಕಲಿತಿದ್ದಾರೆ. ಇವರು ಕೆತ್ತನೆ ಕೆಲಸಕ್ಕೆಂದು ಸಣ್ಣ ದೊಡ್ಡ ಚೀರ್ಣಗಳನ್ನು ಮಾಡಿಕೊಂಡಿರುತ್ತಾರೆ. ಲೋಹದ ಈ ಚೀರ್ಣಗಳಿಗೆ ಎರಡೂ ತುದಿಯಲ್ಲಿ ಬಾಯಿ ಇರುತ್ತದೆ. ಇವು ಸುಮಾರು ಮೂವತ್ತು ಮೂವತ್ತೆರಡು ಇರುತ್ತವೆ.

ಗುಡಿಗಾರರ ಬಳಿ ಸಣ್ಣದೊಂದು ಪೆಟ್ಟಿಗೆ ಇರುತ್ತದೆ. ಇದು ಅವರ ಕೆಲಸದ ಪೆಟ್ಟಿಗೆ. ಇದರಲ್ಲಿ ಚೀರ್ಣ, ಕೊಡತಿ ಇತ್ಯಾದಿಗಳನ್ನು ಇಡಲು ಅರೆಗಳು ಇರುತ್ತವೆ. ನೆಲದ ಮೇಲೆ ಕುಳಿತು ಈ ಪೆಟ್ಟಿಗೆಯ ಮೇಲೆ ಶ್ರೀಗಂಧದ ಕೊರಡು ಇರಿಸಿ ಅವರು ಕೆಲಸ ಮಾಡುತ್ತಾರೆ.



ಶ್ರೀಗಂಧದಲ್ಲಿ ಶ್ರೀಕೃಷ್ಣ


ಗಂಧದ ಕೊರಡಿನ ಮೇಲೆ ಬರೆದ ಚಿತ್ರದ ಹೊರಮೈಯಲ್ಲಿ ಚೀರ್ಣ ಇರಿಸಿ ಮೃದುವಾಗಿ ಮಿಾಟಿದಾಗ ಪೊರೆಯ ಹಾಗೆ ಮರ ಏಳುತ್ತದೆ. ನಿಧಾನವಾಗಿ ವಿಗ್ರಹ ಮೈ ತಾಳುತ್ತದೆ.

ಶ್ರೀಕೃಷ್ಣ, ಲಕ್ಷ್ಮಣ, ಶ್ರೀರಾಮ, ಸೀತೆ, ಅಂಜನೇಯ, ಈಶ್ವರ, ವಿಷ್ಣು, ಉಗ್ರನರಸಿಂಹ, ರಾಘವೇಂದ್ರ ಸ್ವಾಮಿ, ಮೀರಾ, ಏಸುಕ್ರಿಸ್ತ, ಗಣಪತಿ ಹೀಗೆ ಎಲ್ಲ ದೇವ ದೇವತೆಗಳನ್ನೂ ಶ್ರೀಗಂಧದಲ್ಲಿ ಕೆತ್ತುತ್ತಾರೆ.

ಬಂಗಾರದ ಒಡವೆಗಳನ್ನು ಇಡುವ ಕರಂಡಕ. ಗಾಳಿಹಾಕಿಕೊಳ್ಳಲು ಬೀಸಣಿಗೆ. ಪುರಾಣದ ದೃಶ್ಯವಿರುವ ಫಲಕ. ಜಿಂಕೆಗಳ ಹಿಂಡು ಮೇಯುತ್ತಿರುವುದು. ಹೂಬಳ್ಳಿಗಳು ಹಬ್ಬಿರುವುದು. ಆನೆಗಳ ಸಾಲು. ಹೀಗೆ ಶ್ರೀಗಂಧದಲ್ಲಿ ಕೆತ್ತದೇ ಇರುವ ಕಲಾಕೃತಿಗಳೇ ಇಲ್ಲ ಎಂದು ಹೇಳಬಹುದು. ಜೋಗದ ಜಲಪಾತ, ವಿಧಾನಸೌಧ, ಗಾಂಧೀಜಿ, ನೆಹರೂಜಿ ಎಂದೆಲ್ಲ ಗುಡಿಗಾರರು ಕೆತ್ತಿದ್ದಾರೆ.

ದೇಶ ವಿದೇಶದ ಯಾರೇ ನಮ್ಮ ದೇಶಕ್ಕೆ ಬರಲಿ ಅವರಿಗೆ ನೆನಪಿನ ಕಾಣಿಕೆ ಕೊಡಬೇಕಲ್ಲ. ಆಗ ಗುಡಿಗಾರರಿಂದ ಕಲಾಕೃತಿಗಳನ್ನು ಸರಕಾರ ಮಾಡಿಸುತ್ತದೆ. ಹಾಗೂ ಈ ಅತಿಥಿಗಳಿಗೆ ಅದನ್ನು ನೀಡುತ್ತದೆ. ಹೀಗಾಗಿ ಇಂಗ್ಲೆಂಡ್, ಅಮೆರಿಕ, ರಷ್ಯಾ, ಚೀನಾ ಮೊದಲಾದ ದೇಶಗಳಿಗೆಲ್ಲ ಕರ್ನಾಟಕದ ಶ್ರೀಗಂಧದ ಕಲಾಕೃತಿಗಳು ಹೋಗಿವೆ. ನಮ್ಮ ದೇಶದ ಎಲ್ಲ ವಸ್ತು ಸಂಗ್ರಹಾಲಯಗಳಲ್ಲಿ ಶ್ರೀಗಂಧದ ವಸ್ತುಗಳಿವೆ.

ಶ್ರೀಗಂಧದಲ್ಲಿ ಕೆಲಸ ಮಾಡುವಾಗ ಪುಡಿ ಉದುರುತ್ತದೆ. ಇದನ್ನು ಊದಿನಕಡ್ಡಿ ಮಾಡಲು ಬಳಸುತ್ತಾರೆ. ಶ್ರೀಗಂಧದಿಂದ ಸಪೂರಾಗಿ ಸುರಳಿ ಸುರಳಿ ಎಬ್ಬಿಸಿ ಇದರಿಂದ ವಿವಿಧ ಹಾರಗಳನ್ನು ಮಾಡುತ್ತಾರೆ. ಮೊಗ್ಗಿನ ಹಾರ, ಪಟ್ಟಿಹಾರ, ಜೋಳದ ಕುಂಡಿಗೆ ಹಾರ, ಹೊಟ್ಟಿನ ಹಾರ ಎಂದು ಇವುಗಳನ್ನು ಕರೆಯುತ್ತಾರೆ. ಮಣಿಪುಷ್ಪಹಾರ ಅನ್ನುವುದು ಶ್ರೀಗಂಧದಲ್ಲಿ ಮಾಡುವ ಶ್ರೇಷ್ಠವಾದ ಒಂದುಹಾರ. ಶ್ರೀಗಂಧದಿಂದಲೇ ಎಸಳುಗಳನ್ನು ಮಾಡಿ ಇದರಿಂದ ಒಂದೊಂದು ಹೂವು ಸಿದ್ಧ ಪಡಿಸುತ್ತಾರೆ. ನಡುವೆ ಶ್ರೀಗಂಧದ ಮಣಿಗಳನ್ನು ಪೋಣಿಸುತ್ತಾರೆ. ಈ ಮಣಿಪುಷ್ಪಹಾರಕ್ಕೆ ಸಾವಿರಾರು ರೂಪಾಯಿ ಬೆಲೆಯಾಗುತ್ತದೆ. ಈ ಹೂವಿನ ಹಾರಗಳು ಬಾಡುವುದಿಲ್ಲ. ಇವುಗಳ ಸುವಾಸನೆ ಹೋಗುವುದಿಲ್ಲ.



ಶ್ರೀಗಂಧದಲ್ಲಿ ಅವಲೋಕಿತೇಶ್ವರ

ಶ್ರೀಗಂಧದ ಬೆಲೆ ಹೆಚ್ಚು. ಅದು ಎಲ್ಲೆಲ್ಲಿಯೂ ದೊರೆಯುವುದಿಲ್ಲ. ಈ ಕಾರಣಕ್ಕಾಗಿ ಸರಕಾರ ಒಂದು ವ್ಯವಸ್ಥೆ ಮಾಡಿದೆ. ಶಿವಮೊಗ್ಗ ಜಿಲ್ಲೆಯ ಸಾಗರ, ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಎರಡು ಶ್ರೀಗಂಧದ ಸಂಕೀರ್ಣಗಳಿವೆ. ಈ ಸಂಕೀರ್ಣಗಳಿಗೆ ಸದಸ್ಯರಾದರೆ ಸರಕಾರ ಶ್ರೀಗಂಧವನ್ನು ನೀಡುತ್ತದೆ. ಸದಸ್ಯರಾದವರಿಗೆ

ಕಾರ್ಡು ದೊರೆಯುತ್ತದೆ. ಕಾರ್ಡಿಗೆ ಇಷ್ಟು ಶ್ರೀಗಂಧ ಎಂದು ನೀಡಲಾಗುತ್ತದೆ. ಸರಕಾರ ಅರ್ಧಬೆಲೆಗೆ ಶ್ರೀಗಂಧವನ್ನು ಕೊಡುತ್ತದೆ. ಅಲ್ಲದೆ ಗುಡಿಗಾರರು ಕೆತ್ತುವ ವಸ್ತುಗಳನ್ನು ಈ ಸಂಕೀರ್ಣಗಳು ಕೊಳ್ಳುತ್ತವೆ. ಕಲಾವಿದನಿಗೆ ನಷ್ಟವಾಗಬಾರದಲ್ಲವೆ? ಅದಕ್ಕೆಂದೇ ಸಂಕೀರ್ಣದ ಓರ್ವ ಅಧಿಕಾರಿ, ಕೆತ್ತಿದ ವಿಗ್ರಹಕ್ಕೆ ಬೆಲೆ ಕಟ್ಟುತ್ತಾನೆ. ವಿಗ್ರಹದ ಅಂದ ಚೆಂದ ಅದರ ತೂಕ ಅದನ್ನು ಕೆತ್ತಲು ಹಿಡಿದಿರುವ ಸಮಯ. ಎಲ್ಲ ಲೆಕ್ಕ ಹಾಕಿ ಇದರ ಬೆಲೆ ಇಷ್ಟು ಎಂದು ಆತ ಹೇಳುತ್ತಾನೆ. ಸರಕಾರ ಅದನ್ನು ಕೊಳ್ಳುತ್ತದೆ.

ಕರ್ನಾಟಕದ ಕರಕುಶಲ ನಿಗಮ ಈ ವಸ್ತುಗಳನ್ನು ಹೊರ ರಾಜ್ಯಗಳಿಗೆ ಕಳುಹಿಸುತ್ತದೆ. ಹೊರ ದೇಶಗಳಿಗೂ ಈ ಚೆಂದದ ವಸ್ತುಗಳು ಹೋಗುತ್ತವೆ.

ಕಾಡಿನಲ್ಲಿ ಎಲ್ಲೋ ಮೂಲೆಯಲ್ಲಿ ಬೆಳೆಯುತ್ತದೆ ಶ್ರೀಗಂಧ. ಅದನ್ನು ಅರಣ್ಯ ಇಲಾಖೆ ಕಡಿದು ಸಂಗ್ರಹಿಸುತ್ತದೆ. ಗುಡಿಗಾರರಿಗೆ ನೀಡುತ್ತದೆ. ಅವರು ಅದನ್ನು ಕತ್ತರಿಸಿ ಕೆತ್ತಿ ವಿಗ್ರಹದ ರೂಪ ಕೊಡುತ್ತಾರೆ. ಅದು ಹೊರದೇಶಕ್ಕೆ ಪ್ರಯಾಣ ಮಾಡುತ್ತದೆ. ಕಲಾವಿದನಿಗೂ ಹೆಸರು. ಕರ್ನಾಟಕಕ್ಕೂ ಹೆಸರು. ಜೊತೆಗೆ ರಾಜ್ಯದ ಬೊಕ್ಕಸಕ್ಕೆ ಹಣ. ಇದು ಶ್ರೀಗಂಧದ ಕತೆ.

* * *

ಬಿದಿರು


ದಂತದ ಹಾಗೆ ಇದು ಯಾವುದೇ ಪ್ರಾಣಿಯಿಂದ ಬಂದುದಲ್ಲ. ಶ್ರೀಗಂಧದ ಹಾಗೆ ಪರಿಮಳ ಬೀರುವುದಲ್ಲ. ಆದರೆ ಅಷ್ಟೇ ಬೆಲೆ ಇರುವ ಮತ್ತೊಂದು ವಸ್ತು. ಅದು ಬಿದಿರು.

ಬಿದಿರನ್ನು ರಾಕ್ಷಸ ಹುಲ್ಲು ಎಂದು ಕರೆಯಲಾಗುತ್ತದೆ. ಬಿದಿರಿನಲ್ಲಿ ಇನ್ನೂರರಿಂದ ಮೂನ್ನೂರವರೆಗೆ ಜಾತಿಗಳಿವೆ. ಹುಲ್ಲು ಎಂದು ನಾವು ಕರೆಯುವ ಸಸ್ಯ ಈ ಜಾತಿಯ ಕಿರಿಯ. ಜಾವಾ ದ್ವೀಪದಲ್ಲಿ ಹುಟ್ಟುವ ನೂರಾ ಎಪ್ಪತ್ತು ಅಡಿ ಎತ್ತರದ ಬಿದಿರು ಈ ಜಾತಿಯ ಹಿರಿಯ.

ಬಿದಿರು ಪ್ರಪಂಚದ ಎಲ್ಲ ಕಡೆಗಳಲ್ಲೂ ಬೆಳೆಯುತ್ತದೆ. ಆಫ್ರಿಕಾ, ಅಮೆರಿಕ, ಜಪಾನ್‌ಗಳಲ್ಲೂ ಇದು ದೊರೆಯುತ್ತದೆ. ಚೈನಾ, ಮಲಯ, ಜಾವಾದವರಿಗೂ ಇದರ ಪರಿಚಯವಿದೆ. ಕೆಲವೆಡೆ ಹತ್ತರಿಂದ ನಲ್ವತ್ತು ಅಡಿ ಮತ್ತು ಕೆಲವು ಕಡೆ ನೂರಮೂವತ್ತರಿಂದ ನೂರನಲ್ವತ್ತು ಅಡಿಗಳವರೆಗೆ ಇದು ಬೆಳೆಯುತ್ತದೆ. ನಡುವೆ ಗಂಟುಗಳು. ತೆಳುವಾದ ಉದ್ದ ಎಲೆ ಮೊದೆಯಾಗಿ ಬೆಳೆಯುವುದು ಇದರ ವೈಶಿಷ್ಟ್ಯ. ಚೈನಾ ದೇಶದಲ್ಲಿ ಬೆಟ್ಟಗಳ ಮೇಲೆ ಬಿದಿರು ಬೆಳೆಯುತ್ತದೆ. ಛಳಿಗಾಲದಲ್ಲಿ ಇದರ ಬೆಳೆ ಅಧಿಕ. ಹೀಗೆಯೇ ಹಿಮಪರ್ವತಗಳಲ್ಲೂ ಬಿದಿರು ಬೆಳೆಯುತ್ತದೆ.

ಬಿದಿರು ಕೆಲವೆಡೆ ಐವತ್ತು ವರ್ಷಗಳಿಗೆ ಒಂದು ಬಾರಿ ಹೂ ಬಿಡುತ್ತದೆ. ಜಪಾನ್ ದೇಶದ ಬಿದಿರು ನೂರಾ ಇಪ್ಪತ್ತು ವರ್ಷಗಳಿಗೆ ಒಂದುಸಾರಿ ಹೂ ಬಿಡುತ್ತದೆ. ಹೂ ಬಿಟ್ಟ ನಂತರ ಇದು ಸಾಯುತ್ತದೆ.

ಬಿದಿರು ಅತಿವೇಗವಾಗಿ ಬೆಳೆಯುತ್ತದೆ. ಕೆಲವು ದೇಶಗಳಲ್ಲಿ ಇದು ದಿನಕ್ಕೆ ಮೂರು ಅಡಿಯ ಹಾಗೆ ಚಿಗುರುವುದೂ ಉಂಟು. ಗೊರಿಲ್ಲಾಗಳಿಗೆ ಎಳೆ ಬಿದಿರು



ಬೆತ್ತದ ಡ್ರೆಸ್ಸಿಂಗ್ ಟೇಬಲ್

ತುಂಬಾ ಇಷ್ಟ. ಮನುಷ್ಯ ಕೂಡ ಎಳೆ ಬಿದಿರನ್ನು ಬಳಸುತ್ತಾನೆ. ಮಲೆನಾಡಿನಲ್ಲಿ ಎಳೆ ಬಿದಿರಿಗೆ ಕಳಲೆ ಎಂದು ಕರೆಯುತ್ತಾರೆ. ಕಳಲೆಗೆ ಒಂದು ರೀತಿಯ ಘಾಟು ವಾಸನೆ ಇರುತ್ತದೆ. ಸಣ್ಣಗೆ ಕತ್ತರಿಸಿ ನೀರಿನಲ್ಲಿ ನೆನೆಯಲು ಇಟ್ಟರೆ ಈ ಘಾಟು ಹೊರಟು ಹೋಗುತ್ತದೆ. ಆಗಾಗ್ಗೆ ಈ ನೀರನ್ನು ಬದಲಾಯಿಸುತ್ತಾರೆ. ಕಳಲೆಯನ್ನು ಇಡಿಯಾಗಿ ನೀರಿನಲ್ಲಿ ಇರಿಸಿ ಕೆಲದಿನಗಳವರೆಗೆ ಕಾದಿಡುತ್ತಾರೆ. ದೊಡ್ಡ ತುಂಡುಗಳಿಂದ ಕಳಲೆ ಉಪ್ಪಿನಕಾಯಿ ಮಾಡುತ್ತಾರೆ. ಆದರೆ ಎಳೆ ಬಿದಿರನ್ನು ಕತ್ತರಿಸುವುದು ಅಪರಾಧ. ಇದಕ್ಕೆ ಸರಕಾರ ಶಿಕ್ಷೆ ವಿಧಿಸುತ್ತದೆ.

ಭಾರತದ ಎಲ್ಲ ರಾಜ್ಯಗಳಲ್ಲೂ ಬಿದಿರು ದೊರೆಯುತ್ತದೆ.

ಬಿದಿರು ಗರ್ಭದಿಂದ ಗೋರಿಯವರೆಗೆ ಮನುಷ್ಯನಿಗೆ ಬೇಕು. ಬಿದಿರಿನಿಂದ ತೊಟ್ಟಿಲುಗಳನ್ನು ಮಾಡುವುದು ಎಲ್ಲರಿಗೂ ಗೊತ್ತಿದೆ. ಗೆಣ್ಣಿನ ಬಳಿ ಕತ್ತರಿಸಿ ಬೇರೆ ಬೇರೆ ಪದಾರ್ಥಗಳನ್ನು ತುಂಬಿಡಲು ಬಳಸುತ್ತಾರೆ. ಒಳಗಿನಿಂದ ಗಂಟನ್ನು ತೆಗೆದರೆ ಇದು ನೀರು ಹಾಯಿಸಬಲ್ಲ ಕೊಳವೆ ಆಗುತ್ತದೆ. ಮನೆ ಮಾಡಿಗೆ ಬಿದಿರು ಹಾಸುತ್ತಾರೆ. ಬಿದಿರ ಗೋಡೆ ಕಟ್ಟಿ ಮಣ್ಣು ಮೆತ್ತುತ್ತಾರೆ. ಕೊನೆಯಲ್ಲಿ ಮನುಷ್ಯ ಸತ್ತಾಗ ಅವನನ್ನು ಹೊರಲು ಬಿದಿರು ಬೇಕು.

ಬಿದಿರು ಹೂ ಬಿಟ್ಟಾಗ ಅದರಲ್ಲಿ ಒಂದು ರೀತಿಯ ಕಾಳು ಹುಟ್ಟುತ್ತದೆ. ಇದನ್ನು ಬಿದಿರಕ್ಕಿ ಎಂದು ಕರೆಯುತ್ತಾರೆ. ಮಲೆನಾಡಿನಲ್ಲಿ ಹೂ ಬಿಡುವುದನ್ನು "ರಾಜಾನ್ನ ಆಗೋದು" ಎಂದು ಹೇಳುತ್ತಾರೆ. ಈ ಬಿದಿರಕ್ಕಿಯನ್ನು ಸಂಗ್ರಹಿಸುತ್ತಾರೆ. ಇದರ ಅನ್ನ ಮಾಡುತ್ತಾರೆ. ಬಿದಿರಿಗೆ ಹೂ ಬಂದರೆ ಅನಂತರ ಬರಗಾಲ ಬರುತ್ತದೆ ಎಂಬ ನಂಬಿಕೆಯೂ ಜನರಲ್ಲಿದೆ.

ಕರ್ನಾಟಕದಲ್ಲಿ ಬೇರೆ ಬೇರೆ ಜಾತಿಯ ಬಿದಿರುಗಳಿವೆ. ಕಾಡುಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಯುವುದು ಕಾಡುಬಿದಿರು. ಹೆಬ್ಬಿದಿರು ಎಂದು ಕೂಡ ಇದನ್ನು ಕರೆಯುತ್ತಾರೆ. ಗಳ, ಬೊಂಬು ಎಂದು ಕೂಡ ಇದಕ್ಕೆ ಹೆಸರಿದೆ. ಬರ್ಮಾ ಬಿದಿರು ಎಂಬುದು ಕೂಡ ಇದರಲ್ಲಿಯ ಒಂದು ಜಾತಿ. ಇದನ್ನು ವಿಶೇಷವಾಗಿ ಕಾಗದ ಮಾಡಲು ಬಳಸುತ್ತಾರೆ. ಈ ಬಿದಿರಿಗೆ ಮೈ ತುಂಬ ಮುಳ್ಳು. ಪೊದೆಯಿಂದ ಬಿದಿರನ್ನು ಬಿಡಿಸಿಕೊಳ್ಳುವುದು ಕಷ್ಟದ ಕೆಲಸವೆ. ಇದರ ಗಂಟುಗಳಲ್ಲಿ ಉದ್ದವಾದ ಟೊಂಗೆಯಾಕಾರದ ಮುಳ್ಳುಗಳು ಬಂದಿರುತ್ತವೆ. ಈ ಬಿದಿರನ್ನು ಬೇಲಿಗೆ ಬಳಸುತ್ತಾರೆ. ಮನೆಗೂ ಉಪಯೋಗಿಸುತ್ತಾರೆ. ಇದು ಗಾತ್ರದಲ್ಲಿ ದಪ್ಪ. ಮೈ ತುಸು ತೆಳು. ಹಸಿರು ಬಣ್ಣ. ಇದಕ್ಕೆ ಸರಕಾರಿ ಬಿದಿರು ಎಂಬ ಬಿರುದೂ ಇದೆ. ಸರಕಾರ ಇದನ್ನು ಹರಾಜಿನ ಮೂಲಕ ಮಾರಾಟ ಮಾಡುತ್ತದೆ.

ಸೆಮೆ ಎಂಬುದು ತುಸು ತೆಳುವಾದ ಆದರೆ ಗಟ್ಟಿಯಾದ ಬಿದಿರು.

ಇದನ್ನು ಕಬ್ಬಿನಂತೆಯೇ ತೋಟಗಳಲ್ಲಿ ಬೆಳೆಸುತ್ತಾರೆ. ಅಲಂಕಾರಕ್ಕಾಗಿ ಮನೆಯ ಮುಂದೆ ಬೆಳೆಸುವುದೂ ಉಂಟು. ಈ ಬಿದಿರನ್ನೇ ತೊಟ್ಟಿಲು, ಬುಟ್ಟಿ, ಇತ್ಯಾದಿ ಮಾಡಲು ಬಳಸುತ್ತಾರೆ. ಈ ಬಿದಿರನ್ನು ಕರ್ನಾಟಕದ ಕೆಲವೆಡೆ ಸೆಮೆ ಎಂದು ಕರೆಯುತ್ತಾರೆ. ಕೆಲವೆಡೆ ಇದಕ್ಕೆ ತೆಮೆ ಎನ್ನುತ್ತಾರೆ.

ಅಂಡೆ ಎಂಬುದು ಮತ್ತೊಂದು ಜಾತಿಯ ಬಿದಿರು. ಇದು ತುಸು ಹಳದಿ ಬಣ್ಣದ್ದು. ಇದಕ್ಕೆ ನಾಮಧಾರಿ ಗಳ ಎಂಬ ಹೆಸರೂ ಇದೆ. ಇದಕ್ಕೆ ನಡುನಡುವೆ ಹಸಿರು ನಾಮಗಳಿವೆ. ಬಣ್ಣದ ಬಿದಿರು ಎಂದೇ ಇದು ಪ್ರಖ್ಯಾತಿ. ಹಸಿರು ಅಂಡೆ ಎಂಬ ಹೆಸರು ಕೂಡ ಈ ಬಿದಿರಿಗೆ ಇದೆ. ಇದು ಹಸಿರು ಬಣ್ಣದಲ್ಲಿ ಇರುತ್ತದೆ.

ಕನ್ನಂಗಿ ಬಿದಿರು ಎಂಬುದು ಮತ್ತೊಂದು ಜಾತಿ. ಕಿರು ಬಿದಿರು ಎಂಬುದೂ ಒಂದು ಜಾತಿಯೆ. ಇವುಗಳನ್ನೆಲ್ಲ ಖಾಸಗಿಯಾಗಿ ಬೆಳೆಸುತ್ತಾರೆ.

ಓಟೆ ಎಂಬುದು ತೀರ ಸಣ್ಣಜಾತಿ. ಇದು ಕೂಡ ಕಬ್ಬಿನ ಹಾಗೆಯೇ ಬೆಳೆಯುತ್ತದೆ. ಆದರೆ ಹೆಬ್ಬೆರಳ ಗಾತ್ರದ್ದು. ಮನೆ ಗೋಡೆಗಳಿಗೆ ಉಪಯೋಗಿಸುತ್ತಾರೆ. ಇದರಿಂದ ಕೊಳವೆ ಮಾಡುತ್ತಾರೆ.

ಪಲ್ಲಕ್ಕಿಯ ದಂಡಿಗೆಯನ್ನು ಕೂಡ ಬಿದಿರಿನಿಂದಲೇ ಮಾಡುತ್ತಾರೆ. ಬಿದಿರು ಎಳೆಯದಿರುವಾಗಲೇ ಅದನ್ನು ಬಗ್ಗಿಸಿ ಕಟ್ಟಿ ಬೆಳೆಸುತ್ತಾರೆ. ಬಿದಿರು ಬೆಳೆದ ಹಾಗೆ ಬೇಕಾದ ಆಕಾರದಲ್ಲಿಯೇ ಬೆಳೆಯುತ್ತದೆ.

ಬೆತ್ತ ಎಂಬುದು ಕೂಡ ಬಿದಿರಿನ ಮತ್ತೊಂದು ಜಾತಿ. ಬೆತ್ತ ಬಣ್ಣದ ಬಿದಿರಿಗಿಂತ ತುಸು ತೆಳ್ಳಗಿರುತ್ತದೆ. ಓಟೆಗಿಂತ ದಪ್ಪಗಿರುತ್ತದೆ. ಒಳಗೆ ಟೊಳ್ಳು. ಆದರೆ ಗಟ್ಟಿ.ಹೀಗೆ ಬಿದಿರಿನಲ್ಲಿ ನಾನಾ ಜಾತಿಗಳಿವೆ.

ಬಿದಿರಿನ ಬಹು ಮುಖ್ಯ ಉಪಯೋಗವೆಂದರೆ ಕಾಗದದ ಉತ್ಪಾದನೆ.

ಮನುಷ್ಯ ವಿದ್ಯಾವಂತನಾದರೆ ಅವನಿಗೆ ಕಾಗದ ಬೇಕು. ಬರೆಯಲು ಕಾಗದ ಬೇಕು. ಓದಲು ಕಾಗದದ ಮೇಲೆ ಮುದ್ರಿಸಿದ ಪತ್ರಿಕೆ ಬೇಕು. ಪುಸ್ತಕ ಬೇಕು.

ಅಮೆರಿಕದ ಪ್ರಜೆಗೆ ಎರಡು ನೂರಾ ಅರವತ್ತೆಂಟು ಕೆ.ಜಿ. ಕಾಗದ ಬೇಕು. ಇಂಗ್ಲೆಂಡಿನವನಿಗೆ ನೂರಾ ಇಪ್ಪತ್ತನಾಲ್ಕು ಕೆ.ಜಿ. ಫ್ರಾನ್ಸ್‌ದೇಶದವನಿಗೆ ಒಂದು ನೂರಾ ಹದಿನೈದು ಕೆ.ಜಿ. ಆದರೆ ಭಾರತದಲ್ಲಿ ತಲಾ ಎರಡು ಕೆ.ಜಿ. ನಾವು ಬಳಸುತ್ತಿರುವ ಕಾಗದದ ಪ್ರಮಾಣ ತೀರಾ ಕಡಿಮೆ. ಅದರೆ ನಮ್ಮಲ್ಲಿ ವಿದ್ಯಾವಂತರು ಹೆಚ್ಚಿದ ಹಾಗೆ ಈ ಪ್ರಮಾಣ ಹೆಚ್ಚುತ್ತದೆ. ಆದರೆ ಈ ಕಾಗದ ನಮಗೆ ಎಲ್ಲಿ ದೊರೆಯಬೇಕು ?

ಕಾಗದವನ್ನು ಮೊಟ್ಟ ಮೊದಲು ತಯಾರಿಸಿದವರು ಚೈನಾ ದೇಶದವರು. ಅದು ಐದು ಸಾವಿರ ವರ್ಷಗಳ ಹಿಂದೆ. ಚೀನಾದೇಶದ ಮುಖ್ಯದಾಖಲೆಗಳನ್ನು ಅವರು ಬರೆದಿದ್ದು ಬಿದಿರಿನ ಹಾಳೆಗಳ ಮೇಲೆ. ಅನಂತರ ಹಗುರವಾದ ಮರವನ್ನು ಕಾಗದ ತಯಾರಿಸಲು ಬಳಸತೊಡಗಿದರು. ಹರಿದ ಬಟ್ಟೆ, ಚಿಂದಿ ಇತ್ಯಾದಿಗಳನ್ನೂ ಉಪಯೋಗಿಸಿದರು. ಆದರೆ ಈಗಲೂ ಕಾಗದ ತಯಾರಿಸುವುದು ಹೆಚ್ಚಾಗಿ ಬಿದಿರಿನಿಂದಲೇ.

ನಮ್ಮ ದೇಶದಲ್ಲಿ ಸುಮಾರು ಇನ್ನೂರಕ್ಕೂ ಹೆಚ್ಚು ಕಾಗದದ ಕಾರ್ಖಾನೆಗಳಿವೆ. ಈ ಕಾರ್ಖಾನೆಗಳು ಹುಲ್ಲು, ನಾರು, ಕಾಡುಮರಗಳ ಜೊತೆಗೆ ಬಿದಿರನ್ನು ಬಳಸಿ ಕಾಗದವನ್ನು ತಯಾರಿಸುತ್ತವೆ. ಬಿದಿರನ್ನು ಸಣ್ಣ ತುಂಡುಗಳನ್ನಾಗಿ ಮಾಡಿಕೊಂಡು ಅದನ್ನು ರುಬ್ಬುತ್ತಾರೆ. ರುಬ್ಬಿದ ತಿರುಳಿನ ಜೊತೆ, ಬೇರೆ ರಾಸಾಯನಿಕಗಳನ್ನು ಸೇರಿಸುತ್ತಾರೆ. ಯಂತ್ರಗಳ ಮೂಲಕ ಹಾಳೆಗಳನ್ನು ತಯಾರಿಸುತ್ತಾರೆ. ಒಂದೂವರೆ ಮಿಲಿಯನ್ ಟನ್ ಕಾಗದ ಸಿದ್ಧಪಡಿಸಲು ಶೇಕಡ ಅರವತ್ತೈದರಷ್ಟು ಬಿದಿರು ಬೇಕು ಎಂಬುದನ್ನು ಗಮನಿಸಿ. ಭದ್ರಾವತಿ ಕಾಗದ ಕಾರ್ಖಾನೆ ಶಿವಮೊಗ್ಗ ಜಿಲ್ಲೆಯಲ್ಲಿ ಸಾವಿರದ ಒಂಬೈನೂರಾ ಮೂವತ್ತೇಳರಲ್ಲಿ ಪ್ರಾರಂಭವಾಯಿತು. ಆಗ ಈ ಕಾರ್ಖಾನೆಗೆ ವರ್ಷಕ್ಕೆ ಒಂದು ಲಕ್ಷ ಟನ್ ಬಿದಿರು ಸರಬರಾಜು ಆಗುತ್ತಿತ್ತು. ಉತ್ತರ ಕನ್ನಡ

ಜಿಲ್ಲೆಯಲ್ಲಿಯೂ ಒಂದು ಕಾರ್ಖಾನೆ ಇದೆ. ಇದಕ್ಕೂ ಬಿದಿರು ಸರಬರಾಜು ಆಗ ಬೇಕು.

ಆದರೆ ಐವತ್ತು-ಅರವತ್ತು ವರ್ಷಗಳಿಗೆ ಒಂದು ಬಾರಿ ಬಿದಿರು ಹೂ ಬಿಡುತ್ತದೆ. ಆಗ ಬಿದಿರು ಸತ್ತುಹೋಗುತ್ತದೆ. ಹೀಗಾಗಿ ನಮ್ಮ ಕಾಗದ ಕಾರ್ಖಾನೆಗಳಿಗೆ ಹೊರಗಿನಿಂದ ಬಿದಿರು ತರಿಸಬೇಕಾಗುತ್ತದೆ. ಕರ್ನಾಟಕಕ್ಕೆ ಬಿದಿರು ಕೇರಳ, ಮಹಾರಾಷ್ಟ್ರ, ತಮಿಳುನಾಡುಗಳಿಂದಲೂ ಬರುತ್ತದೆ.

ಕರ್ನಾಟಕದ ಕೆಲ ಜನಾಂಗಗಳು ಬಿದಿರನ್ನೇ ತಮ್ಮ ಜೀವನೋಪಾಯಕ್ಕೆ ಒಂದು ಆಧಾರ ಮಾಡಿಕೊಂಡಿದ್ದಾರೆ. ಬಿದಿರನ್ನು ಸೀಳಿ ನಿತ್ಯದ ಉಪಯೋಗಕ್ಕೆ ಬರುವ ವಸ್ತುಗಳನ್ನು ಸಿದ್ಧ ಪಡಿಸುತ್ತಾರೆ. ಬಿದಿರಿನ ತೆಳು ಸಿಬಿರುಗಳಿಂದ ಬುಟ್ಟಿ, ಮೊರ ತಯಾರಿಸುತ್ತಾರೆ. ಗೋಡೆಯಂತೆ ಬಳಸಲಾಗುವ ಬಿದಿರ ತಟ್ಟಿ ತುಂಬ ಗಟ್ಟಿಯಾದದ್ದು. ಬಿದಿರ ತೊಟ್ಟಿಲನ್ನು ಎಲ್ಲರೂ ಬಲ್ಲರು.

ನಗರ ಪ್ರದೇಶಗಳಲ್ಲಿಯೂ ಈಗ ಬಿದಿರು ಬಳಕೆಯಾಗುತ್ತಿದೆ. ದೊಡ್ಡ ಹೋಟೆಲುಗಳಲ್ಲಿ ಬಿದಿರಿನಿಂದಲೇ ಕೊಠಡಿಗಳನ್ನು ನಿರ್ಮಿಸುತ್ತಾರೆ. ಒಂದೇ ಆಕಾರಕ್ಕೆ ಬಿದಿರನ್ನು ಕತ್ತರಿಸಿ ಬೇಲಿಯಂತೆ ನಿಲ್ಲಿಸಿ ಅಲಂಕರಿಸುತ್ತಾರೆ. ಬಿದಿರಿಗೆ ಕೆಂಪು, ಹಳದಿ ಬಣ್ಣ ಬಳಿದು ಹೂಬಳ್ಳಿ ಹಬ್ಬಿಸುತ್ತಾರೆ. ಹೂದಾನಿಗಳನ್ನು ದೀಪದ ಅಲಂಕರಣಗಳನ್ನು ಸೀಳಿದ ಬಿದಿರಿನಿಂದ ಮಾಡುತ್ತಾರೆ. ಬಿದಿರನ್ನು ಗೆಣ್ಣಿನ ಮೇಲೆ ಸೀಳಿ ಗದೆಯಂತೆ ಮಾಡಿ ಹೂಜಿಯೋಪಾದಿಯಲ್ಲಿ ನಿಲ್ಲಿಸುತ್ತಾರೆ. ಮೀನು ಹಿಡಿಯುವ ಸಾಧನಗಳನ್ನೂ ಬಿದಿರಿನಿಂದ ಮಾಡುತ್ತಾರೆ.

ಬೆತ್ತ ಮಲೆನಾಡಿನಲ್ಲಿ ಹೇರಳವಾಗಿ ಬೆಳೆಯುತ್ತದೆ. ಇದರ ಬಳಕೆ ದಿನ ದಿನಕ್ಕೂ ಹೆಚ್ಚುತ್ತಿದೆ. ನಾಗರಬೆತ್ತ ಎಂಬುದು ಎಲ್ಲರಿಗೂ ಪರಿಚಿತವಾದದ್ದು. ಮೇಲೆ ಹಿಡಿದುಕೊಳ್ಳಲೆಂದು ಇರುವ ಹಿಡಿ ಹಾವಿನ ಹೆಡೆಯಂತೆ ಇರುತ್ತದೆ. ಇದರ ಕೆಳಗಿನ ಮೈ ಸಪೂರವಾದ್ದು. ಹಾವಿನಂತೆ ಬಳಕುತ್ತದೆ. ಹಿಂದೆ ಶಿಕ್ಷಕರು ಈ

ನಾಗರ ಬೆತ್ತವನ್ನು ಸದಾ ಹಿಡಿದುಕೊಂಡಿರುತ್ತಿದ್ದರು. ಕ್ರಿಶ್ಚಿಯನ್ ಪಾದರಿಗಳೂ ಇದನ್ನು ಬಳಸುತ್ತಿದ್ದರು. ನಾಗರಬೆತ್ತದಲ್ಲಿಯೇ ತುಸು ದಪ್ಪಗಿರುವುದನ್ನು ಊರುಗೋಲನ್ನಾಗಿ ಬಳಸುತ್ತಿದ್ದರು. "ಅಜ್ಜನ ಕೋಲಿದು ನನ್ನಯ ಕುದುರೆ" ಎಂದು ಮಕ್ಕಳು ಹಾಡುವುದನ್ನು ಕೇಳಬಹುದು. ಮಕ್ಕಳು ಕುದುರೆಯಂತೆ ಬಳಸುತ್ತಿದ್ದ ಅಜ್ಜನ ಕೋಲೂ ನುಣುಪಾದ ಬೆತ್ತವೇ.

ಬೆತ್ತದಿಂದ ಮಾಡಲಾದ ಕುರ್ಚಿಗಳು ಇಂದು ಶ್ರೀಮಂತಿಕೆಯ ಸಂಕೇತ. ಇವುಗಳ ಸೊಬಗೇ ಬೇರೆ. ಬೆತ್ತದ ಕುರ್ಚಿಗಳು ಈಗ ನಾನಾ ನಮೂನೆಗಳಲ್ಲಿ ದೊರೆಯುತ್ತಿವೆ. ಮಕ್ಕಳ ಪುಟಾಣಿ ಕುರ್ಚಿಗಳು. ಮೇಲೆ ತೂಗುಹಾಕುವ ಉಯ್ಯಾಲೆ ಕುರ್ಚಿಗಳು, ಇತ್ಯಾದಿ.

ಬೆತ್ತದಿಂದ ಕುರ್ಚಿಗಳನ್ನು ಮಾಡುವುದು ಒಂದು ಕರಕುಶಲ ಕಲೆಯೆ. ಬೆತ್ತವನ್ನು ಬೇಕಾದ ಆಕಾರಕ್ಕೆ ಬಗ್ಗಿಸುವುದು, ಒಂದರಲ್ಲಿ ಒಂದನ್ನು ಸೇರಿಸುವುದು. ಬೆತ್ತದಿಂದಲೇ ತೆಳು ದಾರ ಮಾಡಿಕೊಂಡು ಕಟ್ಟುವುದು - ಹೀಗೇ ಬೇರೆ ಬೇರೆ ರೀತಿಯಲ್ಲಿ ಬೆತ್ತವನ್ನು ಬಳಸಿ, ಬಗೆ ಬಗೆಯ ವಸ್ತುಗಳನ್ನು ತಯಾರಿಸಲಾಗುತ್ತದೆ.

ಬೆತ್ತದ ಮಂಚಗಳು, ಮೇಜು, ಬುಟ್ಟಿ, ಸೋಫಾ, ಡ್ರೆಸ್ಸಿಂಗ್ ಟೇಬಲ್ ಇವೆಲ್ಲ ಹಿಂದಿನಿಂದಲೂ ಬಳಕೆಯಲ್ಲಿವೆ. ಈಗಲೂ ಮರದ ನಂತರ ಬೆತ್ತದ ವಸ್ತುಗಳಿಗೇನೆ ಹೆಚ್ಚು ಬೇಡಿಕೆ. ಇವುಗಳಿಗೆ ಒಂದು ಬಗೆಯ ಗಾಂಭೀರ್ಯ ಕೂಡ ಇದೆ. ಮನೆಯ ಹಜಾರಕ್ಕೆ ಬೆತ್ತದ ಕುರ್ಚಿಗಳೇ ಚಂದ. ತೋಟದ ಮಧ್ಯೆ ಕುಳಿತುಕೊಳ್ಳಲು, ಅಂಗಳದಲ್ಲಿ ಕುಳಿತು ಕೊಳ್ಳಲು ಬೆತ್ತದ ಕುರ್ಚಿಗಳೇ ಯೋಗ್ಯ.

ಮಲೆನಾಡಿನಲ್ಲಿ ಮುಖ್ಯವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಬೆತ್ತದ ಕುರ್ಚಿಯ ಉದ್ಯಮ ತುಂಬಾ ಬೆಳೆದಿದೆ. ಶಿವಮೊಗ್ಗ ಜಿಲ್ಲೆಯ ಸಾಗರ, ತೀರ್ಥಹಳ್ಳಿ ತಾಲೂಕಿನಲ್ಲಿ ಬೆತ್ತದ ಸಾಮಗ್ರಿಗಳನ್ನು ತಯಾರಿಸುವ ಅಂಗಡಿಗಳಿವೆ.

ಹೀಗೆ ಕಾಡಿನ ಉತ್ಪನ್ನಗಳಾದ ದಂತ, ಗಂಧ, ಬಿದಿರು ಹಲವರ ಜೀವನೋಪಾಯಕ್ಕೆ ಸರಳ ಮಾರ್ಗವಾಗಿವೆ.

* *



ಕನ್ನಡ ವಿಶ್ವವಿದ್ಯಾಲಯವು ನವ[illegible]ಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ವ[illegible]ರೆಗೆ ಉತ್ತಮ ಹಾಗೂ ಉಪಯುಕ್ತವಾ[illegible]ಪುಸ್ತಕಗಳನ್ನು ನಿರ್ಮಾಣ ಮಾಡುವ ಸಲುವಾಗಿ [illegible]ಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ [illegible] ಮೊದಲ ಪ್ರಯತ್ನವಾಗಿ ನವಸಾಕ್ಷರರಿಗಾಗಿ [illegible] ಪುಸ್ತಕ ರಚನೆ ಮಾಡಬೇಕೆಂದು ಚಿಂತಿಸು[illegible]ಗ ಬೆಂಬಲಕ್ಕೆ ಬಂದುದು ಲೋಕ ಶಿಕ್ಷಣ ಇಲಾ[illegible]ಸಾಕ್ಷರರಿಗಾಗಿ ಪುಸ್ತಕ ಬರೆಸುವ ತಮ್ಮಲ್ಲಿ[illegible]ಜನೆಯನ್ನು ಅವರು ನಮ್ಮ ವಿಶ್ವವಿದ್ಯಾಲ[illegible]ಸಿಕೊಟ್ಟರು. ವಿಶ್ವವಿದ್ಯಾಲಯವು ಈ [illegible]ನ್ನು ಸಂತಸದಿಂದ ಸ್ವೀಕರಿಸಿ, ಕೂಡಲೇ ನಾಡಿನ [illegible] ಲೇಖಕರನ್ನು, ಭಾಷಾತಜ್ಞರನ್ನು, ಶಿಕ್ಷಣತ[illegible]ಳಗೊಂಡಂತೆ [illegible] ಸಮಿತಿಯನ್ನು ರಚಿಸಿ, ಅ[illegible] ಅಭಿಪ್ರಾಯ, ಸಲಹೆ, ಸಹಕಾರಗಳನ್ನು ಕ[illegible]ರ್ಣೀನ್ಮು[illegible]ಸ್ತಕಗಳ ವಸ್ತು, ಭಾಷೆ [illegible]ಣ ವಿನ್ಯಾಸ, ಚಿತ್ರಗಳ ಮಹತ್ವ, ಸಾಹಿ[illegible]ಕ [illegible]ಮಟ್ಟ [illegible] ಕುರಿತು ಸಮಿತಿಯು [illegible]ಸಲ ಚರ್ಚಿಸಿ ಯೋಜನೆಯನ್ನು ಅನುಷ್ಠಾ[illegible]ಗೆ[illegible]ಸಲು ಸೂಚಿ[illegible]

ನವಸಾಕ್ಷರರಿಗಾಗಿ ಕನ್ನ[illegible]ಲ್ಲಿ ಹಾಗೂ ದೇಶದ ಇತರ ಭಾಷೆಗಳಲ್ಲಿ ಈಗಾಗ[illegible]ಟವಾಗಿರುವ ಪುಸ್ತಕಗಳನ್ನೆಲ್ಲ ಒಟ್ಟು[illegible], ಅವುಗಳ ಮಾದರಿ, ಮಾಹಿತಿಗಳನ್ನೆಲ್ಲ [illegible]ಷಾತಜ್ಞರಿಂದ ಪರಿಶೀಲಿಸಲಾಯಿತು. ಜೊ[illegible] ಈ ಕ್ಷೇತ್ರದ ಅನುಭವಿ ಕ್ಷೇತ್ರಸಹಾಯಕರನ್ನು ನೇಮಿ[illegible]ಡು ಅವರಿಗೆ ಕಮ್ಮಟಗಳನ್ನು ನಡೆಸಿ, [illegible]ವಳಿ ತಯಾರಿಸಿಕೊಟ್ಟು, ಅವರನ್ನು ರಾಜ್ಯದಾದ್ಯ[illegible]ದ್ದು ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ [illegible]ದೋಲನದಲ್ಲಿ ಕಲಿತವರಿಂದ ಮತ್ತು ಕಲಿಯುತ್ತಿ[illegible]ರಿಂದ ಅದರ ಗುಣದೋಷಗಳ ಬಗ್ಗೆ ಅ[illegible]ನ್ನು ಸಂಗ್ರಹಿಸಿ, ಅನಂತರ ಅವುಗಳನ್ನ[illegible]ದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇ[illegible] [illegible]ತ್ರಗಳಿಗೆ [illegible]ಗಿ, ಕ್ಷೇತ್ರ[illegible]ಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು [illegible]ಸಾಕ್ಷರರ [illegible]ಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು